


**ಈ ಬಾರಿಯ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಯಾವ ತಂಡ ಪ್ರಶಸ್ತಿ ಗೆಲ್ಲುತ್ತದೆ ಎನ್ನುವುದಕ್ಕಿಂತ ಲಯೊನೆಲ್ ಮೆಸ್ಸಿ ಹಾಗೂ ಕ್ರಿಶ್ಚಿಯಾನೊ ರೊನಾಲ್ಡೊ ಇವರಲ್ಲಿ ಯಾರು ಶ್ರೇಷ್ಠ ಆಟವಾಡುತ್ತಾರೆ ಎನ್ನುವ ವಿಷಯವೇ ಹೆಚ್ಚು ಚರ್ಚೆಯಾಗುತ್ತಿದೆ.**

■ ಪ್ರಮೋದ ಜಿ.ಕೆ.

ಗೋಲಾಗಿ ಪರಿವರ್ತಿಸಿದ್ದರು. ತಮ್ಮ ಬಳಿ ಬಂದ ಚೆಂಡನ್ನು ತಂಡದ ಸಹ ಆಟಗಾರನಿಗೆ 'ಪಾಸ್' ಮಾಡುವಲ್ಲಿ ರೊನಾಲ್ಡೊಗಿಂತ ಮೆಸ್ಸಿಯೇ ಚುರುಕಾಗಿದ್ದಾರೆ. 2016–17ರ ಲಾ ಲೀಗ್ ಋತುವಿನಲ್ಲಿ ಮೆಸ್ಸಿ ಚುರುಕಾಗಿ ಪಾಸ್‌ಗಳನ್ನು ನೀಡಿ 78 ಬಾರಿ ಗೋಲು ಗಳಿಸುವ ಅವಕಾಶಗಳನ್ನು ಸೃಷ್ಟಿಸಿದ್ದರು. ರೊನಾಲ್ಡೊ ಇದೇ ಟೂರ್ನಿಯಲ್ಲಿ 30 ಸಲವಷ್ಟೇ 'ಪಾಸ್' ಮೂಲಕ ಗೋಲಿನ ಅವಕಾಶಗಳನ್ನು ಸೃಷ್ಟಿಸಿದ್ದರು. ರೊನಾಲ್ಡೊ ಹಿಂದಿನ ಎರಡು ವರ್ಷಗಳಿಂದ ಏಳು ಬಾರಿ ಮಾತ್ರ ಫ್ರೀ ಕಿಕ್ ಮೂಲಕ ಗೋಲುಗಳನ್ನು ಗಳಿಸಿದ್ದರು.

ಆಟದ ಕೆಲ ಕೌಶಲಗಳ ವಿಷಯದಲ್ಲಿ ಮೆಸ್ಸಿ ಮುಂದಿದ್ದರೂ, ಪೆನಾಲ್ಟಿ ಅವಕಾಶಗಳನ್ನು ಗೋಲಾಗಿ ಪರಿವರ್ತಿಸುವಲ್ಲಿ ರೊನಾಲ್ಡೊ ಮುಂಚೂಣಿಯಲ್ಲಿದ್ದಾರೆ. 2017ರ ಋತುವಿನ ಅಂತ್ಯಕ್ಕೆ ಕ್ಲಬ್ ಮತ್ತು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಮೆಸ್ಸಿ ಪೆನಾಲ್ಟಿ ಮೂಲಕ 74 ಸಲ, ರೊನಾಲ್ಡೊ 95 ಸಲ ಚೆಂಡನ್ನು ಗುರಿ ಸೇರಿಸಿದ್ದಾರೆ.

## ಸಮ ಸಾಮರ್ಥ್ಯದ ಸವಾಲು

ಹಣದ ಹೊಳೆ ಹರಿಸುವ ಕ್ಲಬ್ ಟೂರ್ನಿಗಳಲ್ಲಿ ಮೆಸ್ಸಿ ಬಾರ್ಸಿಲೊನಾ, ರೊನಾಲ್ಡೊ ರಿಯಲ್ ಮ್ಯಾಡ್ರಿಡ್ ತಂಡಗಳನ್ನು ಪ್ರತಿನಿಧಿಸುತ್ತಾರೆ.

ಈ ಟೂರ್ನಿಯ ಒಂದೇ ಋತುವಿನಲ್ಲಿ ಇಬ್ಬರೂ ತಲಾ 50ಕ್ಕೂ ಹೆಚ್ಚು ಗೋಲುಗಳನ್ನು ಹೊಡೆದಿದ್ದಾರೆ. ಕ್ಲಬ್ ಮತ್ತು ಅಂತರರಾಷ್ಟ್ರೀಯ ಮಟ್ಟದ ಪಂದ್ಯಗಳು ಸೇರಿದಂತೆ ತಲಾ 600 ಹೆಚ್ಚು ಗೋಲುಗಳನ್ನು ಕಲೆ ಹಾಕಿದ್ದಾರೆ. ಪ್ರತಿಷ್ಠಿತ ಯು.ಇ.ಎಫ್.ಎ. ಚಾಂಪಿಯನ್ಸ್ ಲೀಗ್ ಟೂರ್ನಿಯಲ್ಲಿ ಇದುವರೆಗೆ ಏಳು ಬಾರಿ ಹ್ಯಾಟ್ರಿಕ್ ಗೋಲುಗಳನ್ನು ಹೊಡೆದ ಕೀರ್ತಿ ಕೂಡ ಮೆಸ್ಸಿ ಮತ್ತು ರೊನಾಲ್ಡೊ ಹೆಸರಿನಲ್ಲಿದೆ. ಫಿಫಾ ನೀಡುವ ಪ್ರತಿಷ್ಠಿತ ಬಲೂನ್ ಡಿ. ಓರ್ ಪ್ರಶಸ್ತಿಯನ್ನು ಇಬ್ಬರೂ ತಲಾ ಐದು ಸಲ ಪಡೆದಿದ್ದಾರೆ. ಫಿಫಾ ಪ್ರಕಟಿಸಿದ್ದ ವಿಶ್ವದ ಶ್ರೇಷ್ಠ 11 ಫುಟ್‌ಬಾಲ್ ಆಟಗಾರರ ಪಟ್ಟಿಯಲ್ಲಿ ಇವರ ಹೆಸರು ಇದೆ.

ಇವರು ಕ್ಲಬ್ ಟೂರ್ನಿಗಳಲ್ಲಿ ಒಂದು ಋತುವಿನಲ್ಲಿ ಕನಿಷ್ಠ ಎರಡು ಬಾರಿ ಮುಖಾಮುಖಿಯಾಗುತ್ತಾರೆ. ಆ ಪಂದ್ಯ ಸಹಜವಾಗಿ ಹೆಚ್ಚು ಪ್ರಚಾರ ಪಡೆಯುತ್ತದೆ. 2014ರ ಮಾರ್ಚ್‌ನಲ್ಲಿ ಬಾರ್ಸಿಲೊನಾ ಮತ್ತು ರಿಯಲ್ ಮ್ಯಾಡ್ರಿಡ್ ತಂಡಗಳು ಪೈಪೋಟಿ ನಡೆಸಿದ್ದಾಗ ಆ ಪಂದ್ಯವನ್ನು ವಿಶ್ವದಾದ್ಯಂತ 40 ಕೋಟಿ ಜನ ವೀಕ್ಷಿಸಿದ್ದರು! ಇದರಿಂದ ಕೋಟ್ಯಂತರ ರೂಪಾಯಿ ಹಣ ಕೂಡ ಹರಿದಾಡಿತ್ತು. ಮೆಸ್ಸಿ ಅವರಿಗೆ ಅಡಿಡಾಸ್ (ಆದಿದಾಸ್) ಕಂಪನಿ ಮತ್ತು ರೊನಾಲ್ಡೊ ಅವರಿಗೆ ನೈಕ ಕಂಪನಿ ಅತ್ಯಂತ ದುಬಾರಿ ಬೆಲೆಯ ಕ್ರೀಡಾ ಸಾಮಗ್ರಿಗಳನ್ನು ನೀಡುತ್ತಿದೆ. ಇದರಿಂದ ಉತ್ಪನ್ನಗಳ ಮಾರಾಟ ಕೂಡ ದುಪ್ಪಟ್ಟಾಗಿದೆ. ಇವರಿಬ್ಬರೂ ಫೇಸ್‌ಬುಕ್‌ನಲ್ಲಿ 211 ದಶಲಕ್ಷ ಹಿಂಬಾಲಕರಿದ್ದಾರೆ.

2009ರಲ್ಲಿ ರೊನಾಲ್ಡೊ 131 ದಶಲಕ್ಷ ಡಾಲರ್ ಹಣಕ್ಕೆ ರಿಯಲ್ ಮ್ಯಾಡ್ರಿಡ್ ಕ್ಲಬ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿದ್ದರು. ಪ್ರತಿ ವರ್ಷ ಸುಮಾರು 50 ದಶಲಕ್ಷ ಡಾಲರ್ ಹಣ ಸಂಪಾದಿಸುತ್ತಾರೆ. ಮೆಸ್ಸಿ ವರ್ಷಕ್ಕೆ 59 ದಶಲಕ್ಷ ಡಾಲರ್ ಹಣ ಗಳಿಸುತ್ತಾರೆ.

## ಮೆಸ್ಸಿ ಮೋಡಿಗೆ ಕಾತರ

ಆಟದ ವಿಷಯದಲ್ಲಿ ರೊನಾಲ್ಡೊಗಿಂತ ಭಿನ್ನತೆ ಹೊಂದಿರುವ ಮೆಸ್ಸಿ ಅವರ ಕಾಲ್ಚಳಕದ ಮೋಡಿ ಈ ಬಾರಿಯ ವಿಶ್ವಕಪ್‌ನಲ್ಲಿ ಹೇಗಿರಲಿದೆ ಎನ್ನುವುದು ಕುತೂಹಲ ಮೂಡಿಸಿದೆ.

ಏಕೆಂದರೆ, ಅವರು ಇತ್ತೀಚಿನ ಟೂರ್ನಿಗಳಲ್ಲಿ ಶ್ರೇಷ್ಠ ಪ್ರದರ್ಶನ ನೀಡಿದ್ದಾರೆ. ಫಿಫಾ ವಿಶ್ವಕಪ್‌ನಲ್ಲಿ ಅತ್ಯುತ್ತಮ ಪ್ರದರ್ಶನಕ್ಕೆ ನೀಡಲಾಗುವ 'ಚಿನ್ನದ ಚೆಂಡು' ಗೌರವವನ್ನು ಎರಡು ಸಲ ಪಡೆದ ವಿಶ್ವದ ಏಕೈಕ ಆಟಗಾರ ಎನಿಸಿದ್ದಾರೆ. 'ಯುರೋಪಿಯನ್ ಚಿನ್ನದ ಬೂಟು' ಪ್ರಶಸ್ತಿ ಐದು ಸಲ, ಯು.ಇ.ಎಫ್.ಎ. ಚಾಂಪಿಯನ್ಸ್ ಲೀಗ್‌ನಲ್ಲಿ 100 ಗೋಲುಗಳನ್ನು ಹೊಡೆದ ಕಿರಿಯ ವಯಸ್ಸಿನ ಆಟಗಾರ ಗೌರವ ಕೂಡ ಹೊಂದಿದ್ದಾರೆ.

## ರೊನಾಲ್ಡೊ ಆಟ ನಡೆಯುವುದೇ?

ಪಾಸಿಂಗ್‌ನಲ್ಲಿ ಚುರುಕುತನ ಹೊಂದಿರುವ ಕ್ರಿಶ್ಚಿಯಾನೊ ರೊನಾಲ್ಡೊ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್‌ನಲ್ಲಿದ್ದಾಗ ಪ್ರೀಮಿಯರ್ ಲೀಗ್‌ನಲ್ಲಿ ತಮ್ಮ ಕ್ಲಬ್‌ಗೆ ಮೂರು ಬಾರಿ ಪ್ರಶಸ್ತಿ, ಒಂದು ಸಲ ರನ್ನರ್ಸ್ ಅಪ್ ಸ್ಥಾನ ತಂದುಕೊಟ್ಟಿದ್ದಾರೆ.

ಇವರ ನಾಯಕತ್ವದಲ್ಲಿ ಪೋರ್ಚುಗಲ್ ತಂಡ 2016ರಲ್ಲಿ ಯು.ಇ.ಎಫ್.ಎ. ಯುರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ ಚಾಂಪಿಯನ್ ಆಗಿತ್ತು. ಎರಡು ಸಲ ರನ್ನರ್ಸ್ ಅಪ್ ಸ್ಥಾನ ಪಡೆದಿತ್ತು. ಫಿಫಾ ಕಾನ್ಫೆಡರೇಷನ್ ಕಪ್‌ನಲ್ಲಿ ಮೂರನೇ ಸ್ಥಾನ ಗಳಿಸಿತ್ತು. ವಿಶ್ವದ ಶ್ರೇಷ್ಠ ಆಟಗಾರರಾದ ಮೆಸ್ಸಿ ಮತ್ತು ರೊನಾಲ್ಡೊ ಅವರು ಅನೇಕ ಟೂರ್ನಿಗಳಲ್ಲಿ ತಮ್ಮ ದೇಶಕ್ಕೆ ಹಾಗೂ ಕ್ಲಬ್‌ಗಳಿಗೆ ಪ್ರಶಸ್ತಿ ತಂದುಕೊಟ್ಟರೂ ವಿಶ್ವಕಪ್ ಎತ್ತಿ ಹಿಡಿಯುವ ಆಸೆ ಈಡೇರಿಲ್ಲ.

ನಿವೃತ್ತಿಯ ಅಂಚಿನಲ್ಲಿರುವ ಇವರಿಬ್ಬರಿಗೂ ಇದು ಕೊನೆಯ ವಿಶ್ವಕಪ್. ಆದ್ದರಿಂದ ಒಂದು ಕೋಟಿ ಮೌಲ್ಯದ ವಿಶ್ವಕಪ್ ಹಾಗೂ 256 ಕೋಟಿ ರೂಪಾಯಿ ಚಾಂಪಿಯನ್ ತಂಡದ ಬಹುಮಾನ ಮೊತ್ತ ಯಾರ ಪಾಲಾಗಲಿದೆ, ಯಾರು ಶ್ರೇಷ್ಠ ಆಟಗಾರ ಎನಿಸಿಕೊಳ್ಳುತ್ತಾರೆ ಎನ್ನುವುದು ಕುತೂಹಲ ಮೂಡಿಸಿದೆ. ●